# ಕನ್ನಡ ಪೋಸ್ಟ್

ಸಂಪಾದಕ : ಮಂಜು ಬನವಾಸೆ

KANNADA POST

ಇದು ಸುದ್ದಿ ವಿಲಾಸ

ಕನ್ನಡ ದಿನಪತ್ರಿಕೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.02 | Issue. 204 | Pages. 2 | Date: 23-07-2026, THURSDAY | RNI NO: KARKAN/2024/89601 | Kannada Daily

ಸಂಪುಟ : 02 - ಸಂಚಿಕೆ : 204 - ಪುಟಗಳು : 2 | 23-07-2026 ಗುರುವಾರ | Ph: 8762954248 | ದರ : ₹1


# ಚೆನ್ನಮ್ಮಗೆ ಹಾಲು-ತುಪ್ಪ ಸಮರ್ಪಣೆ

## ಗೌಡರು ಗಾಢ ಮೌನ: ತಾಯಿ ಮಾನಸಿಕ ಯಾತನೆ ನೆನೆದು ಹೆಚ್.ಡಿ.ಕೆ ಭಾವುಕ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರ ಧರ್ಮಪತ್ನಿ ಚೆನ್ನಮ್ಮ ಅವರ ಸಮಾಧಿಗೆ ಕುಟುಂಬ ಸದಸ್ಯರು ಇಂದು ಹಾಲು ತುಪ್ಪ ಸಮರ್ಪಣೆ ಮಾಡಿದರು.

ಎಚ್.ಡಿ. ದೇವೇಗೌಡರು, ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ, ಮಾಜಿ ಸಚಿವ ಎಚ್.ಡಿ.ರೇವಣ್ಣ ಹಾಗೂ ಹೆಣ್ಣು ಮಕ್ಕಳಾದ ಅನಸೂಯ, ಶೈಲಜಾ ಸೇರಿ ಎಲ್ಲರೂ ಕೈಜೋಡಿಸಿ ಹಾಲು ತುಪ್ಪ ಸಮರ್ಪಣೆ ಮಾಡಿದರು.

ಚೆನ್ನಮ್ಮ ಅವರು ಹೊಳೆನರಸೀಪುರ ತಾಲ್ಲೂಕಿನ ಮಾವಿನಕೆರೆ ಬೆಟ್ಟದ ರಂಗನಾಥಸ್ವಾಮಿ ತಪ್ಪಲಿನಲ್ಲಿ ಸಮಾಧಿ ಸೇರಿ ಇಂದಿಗೆ ಮೂರನೇ ದಿನ ತುಂಬಿದ್ದರಿಂದ ಕುಟುಂಬದ ಎಲ್ಲ ಸದಸ್ಯರು ಆಗಮಿಸಿ ಹಾಲು ತುಪ್ಪ ಎರೆದರು.

ಈ ವೇಳೆ ಚೆನ್ನಮ್ಮ-ದೇವೇಗೌಡರ ಹಿರಿಯ ಮಗ ಡಾ. ಬಾಲಕೃಷ್ಣಗೌಡ, ಡಾ.ರಮೇಶ್ ಸೇರಿದಂತೆ ಅಪಾರ ಬಂಧುಗಳು ಆಗಮಿಸಿದ್ದರು. ಆರಂಭದಲ್ಲಿ ಸಮಾಧಿ ಸ್ವಚ್ಚತೆ ಮಾಡಿ, ಅರಿಶಿನ-ಕುಂಕುಮ ಹಚ್ಚಿ ನಂತರ ವಿಶೇಷ ಪೂಜೆ ಜೊತೆಗೆ ಹಾಲು-ತುಪ್ಪ ಅರ್ಪಿಸಲಾಯಿತು.

ದೇವೇಗೌಡರ ಕುಟುಂಬ ಸದಸ್ಯರೊಂದಿಗೆ ಜೆಡಿಎಸ್ ಪಕ್ಷದ ಶಾಸಕರು, ಮಾಜಿ ಶಾಸಕರು, ಮುಖಂಡರು, ಕಾರ್ಯಕರ್ತರು

ಸಾವಿರಾರು ಸಂಖ್ಯೆಯಲ್ಲಿ ಆಗಮಿಸಿದ್ದರು.

ಸಮಾಧಿ ಬಳಿ ರುದ್ರ ಚಮಕ ಶ್ಲೋಕ ಹಾಗೂ ವಿಷ್ಣು ಸಹಸ್ರ ನಾಮ ಶ್ಲೋಕವನ್ನು ನೆರೆದಿದ್ದ ಮಹಿಳೆಯರು,



ಅರ್ಚಕರು ಹಾಡಿದರು.

ಚೆನ್ನಮ್ಮ ಅವರ ಮುಕ್ತಿಗಾಗಿ ಮೂವರು ಪುರೋಹಿತರಿಂದ ಮಂಗಳವಾರದಿಂದಲೇ ಹನ್ನೊಂದು ದಿನದ ಕಾರ್ಯ ನಡೆಯುವವರೆಗೂ ಶ್ಲೋಕ ಪಠಿಸುವಂತೆ ಈಗಾಗಲೇ ದೇವೇಗೌಡರು ಅರ್ಚಕರಿಗೆ ಸೂಚಿಸಿದ್ದಾರೆ. ಹಾಗೆಯೇ ಚೆನ್ನಮ್ಮನವರು ನಿತ್ಯ ಪೂಜೆಯಲ್ಲಿ ಹೇಳುತ್ತಿದ್ದ ಶ್ಲೋಕಗಳನ್ನು ಹೇಳುವ ಮೂಲಕ ಪೂಜೆ ಕಾರ್ಯ ನಡೆಯುತ್ತಿದೆ.

ಹಾಗೆಯೇ ಅಂತ್ಯಕ್ರಿಯೆ ಆದ ಘಳಿಗೆಯಿಂದಲೂ ಉರಿಯುತ್ತಿರುವ ನಂದಾದೀಪ ಬೆಳಗಯತ್ತಲೇ ಇದ್ದು, ಅದರ ಸಮ್ಮುಖದಲ್ಲಿ ಶ್ಲೋಕ ಪಠಣವನ್ನು ಕುಟುಂಬ ಸದಸ್ಯರೂ ಮಾಡಿದರು.

ಕಡೆಗೆ ಪೂಜೆ ಬಳಿಕ ಒಬ್ಬೊಬ್ಬರು ಹಾಲು ತುಪ್ಪ ಅರ್ಪಣೆ ಮಾಡಿದರು. ಮೊದಲಿಗೆ ದೇವೇಗೌಡರು ಸಮಾಧಿಗೆ ಹಾಲು ತುಪ್ಪ ಅರ್ಪಣೆ ಮಾಡಿದರು. ನಂತರ ಕುಟುಂಬ ಸದಸ್ಯರು ಒಬ್ಬೊಬ್ಬರಾಗಿ ಹಾಲು ತುಪ್ಪ ಸುರಿದರು.

ದೇವೇಗೌಡರು, ಹಿರಿಯ ಪುತ್ರ ಬಾಲಕೃಷ್ಣ, ಎಚ್.ಡಿ.ರೇವಣ್ಣ ಕುಮಾರಸ್ವಾಮಿ ಆದಿಯಾಗಿ ಎಲ್ಲರಿಂದಲೂ ತಾಯಿಗೆ ಹಾಲುತುಪ್ಪ ಸಮರ್ಪಣೆ ಮಾಡಿದರು. ಕಡೆಯಲ್ಲಿ ಸೊಸೆಯಂದಿರು, ಮೊಮ್ಮಕ್ಕಳೂ ಹಾಲು ತುಪ್ಪ ಸುರಿಯಲು ಕೈ ಜೋಡಿಸಿದರು.

> ತಾಯಿ ಚೆನ್ನಮ್ಮ ಕಳೆದ ಒಂದೂವರೆ ವರ್ಷದಿಂದ ಹಾಸಿಗೆ ಹಿಡಿದು ಹಿಂಸೆ ಅನುಭವಿಸಿದ್ದರು. ನೆನಪಿನ ಶಕ್ತಿ ಕುಂದಿ ಹೋಗಿ ಯಾರನ್ನೂ ಗುರುತಿಸಲಾಗದ ಪರಿಸ್ಥಿತಿಗೆ ತಲುಪಿದ್ದರು.
>
> ಆದರೂ ಈ ಅವಧಿಯಲ್ಲಿ ಅವರು ಯಾರೇ ಬಂದರೂ ಊಟ ಮಾಡಿದೀರಾ, ಊಟ ಮಾಡಿ ಎಂಬ ಎರಡು ಪದಗಳನ್ನು ಹೊರತುಪಡಿಸಿ ಬೇರೇನೂ ಮಾತನಾಡುತ್ತಿರಲಿಲ್ಲ ಎಂದು ಹೇಳಿದರು. ಆದಾಗ್ಯೂ, ತಮ್ಮನ್ನು ಮತ್ತು ತಮ್ಮಿಬ್ಬರು ತಂಗಿಯರನ್ನು ನೆನಪಿನಲ್ಲಿ ಇಟ್ಟುಕೊಂಡಿದ್ದರು ಎಂದು ನೆನೆದು ಕುಮಾರಸ್ವಾಮಿ ಗದ್ಗದಿತರಾದರು.

ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ, ನಮ್ಮ ಕುಟುಂಬದಲ್ಲಿ ನಡೆದ ಕೆಲವು ಘಟನೆಗಳಿಂದ ತಾಯಿ ಚೆನ್ನಮ್ಮ ಮಾನಸಿಕ ಯಾತನೆಗೆ ಒಳಗಾಗಿದ್ದರು. ಅವನನ್ನು ಯಾವಾಗ ಕರ್ಕೊಂಡು ಬರ್ತೀಯಪ್ಪ ಎಂದು ಪದೇ ಪದೆ ಕೇಳುತ್ತಿದ್ದರು. ಆ ಮಾತು ಇಂದಿಗೂ ತಮಗೆ ನೋವುಂಟು ಮಾಡುತ್ತದೆ ಎಂದು ಪರೋಕ್ಷವಾಗಿ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಪ್ರಕರಣ ಉಲ್ಲೇಖಿಸಿದರು.

ಕಳೆದ ಒಂದೂವರೆ ವರ್ಷದಿಂದ ತಾಯಿ ಅನುಭವಿಸಿದ ಹಿಂಸೆ, ಮಾನಸಿಕ ಯಾತನೆ ನೆನೆದು ಭಾವುಕರಾದರು.

# ಖರ್ಗೆ ಹುಟ್ಟುಹಬ್ಬ ನಿಮಿತ್ತ ಹಣ್ಣು ಹಂಪಲು ವಿತರಣೆ



ಹಾಸನ: ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ್ ಖರ್ಗೆ ಅವರ ಹುಟ್ಟುಹಬ್ಬದ ಅಂಗವಾಗಿ ಜಿಲ್ಲಾ ಕಾಂಗ್ರೆಸ್ ಎಸ್ಸಿ -ಎಸ್ಟಿ ಘಟಕದ ವತಿಯಿಂದ ಬುಧವಾರ ಹಾಸನ ಜಿಲ್ಲಾಸ್ಪತ್ರೆ ಒಳರೋಗಿಗಳಿಗೆ ಹಣ್ಣುಗಳನ್ನು ವಿತರಿಸಲಾಯಿತು.

ಎಸ್ಸಿ -ಎಸ್ಟಿ ಘಟಕದ ಜಿಲ್ಲಾಧ್ಯಕ್ಷ ಮಲ್ಲಿಗೆವಾಳು ದ್ಯಾವಪ್ಪ ಅವರ ನೇತೃತ್ವದಲ್ಲಿ ಕಾಂಗ್ರೆಸ್ ಮುಖಂಡರು ಒಳರೋಗಿಗಳ ಆರೋಗ್ಯ ವಿಚಾರಿಸಿ ಅವರನ್ನು ಸಂತೈಸಿ ಹಣ್ಣುಗಳನ್ನು ವಿತರಿಸಿ ಶೀಘ್ರವಾಗಿ ಗುಣಮುಖರಾಗಿ ಎಂದು ಶುಭ ಹಾರೈಸಿದರು

ಬಳಿಕ ಮಾತನಾಡಿದ ಮಲ್ಲಿಗೆವಾಳು ದ್ಯಾವಪ್ಪ, ಇಂದು ಮಲ್ಲಿಕಾರ್ಜುನ ಖರ್ಗೆ ಅವರಿಗೆ 84ನೇ ಹುಟ್ಟುಹಬ್ಬ

ಸಂಭ್ರಮ.ಅವರ ಹುಟ್ಟು ಹಬ್ಬದ ಅಂಗವಾಗಿ ಜಿಲ್ಲಾಸ್ಪತ್ರೆಯ ಒಳ ರೋಗಿಗಳಿಗೆ ಹಣ್ಣುಗಳನ್ನು ವಿತರಿಸುವ ಮೂಲಕ ಅವರ ಹುಟ್ಟು ಹಬ್ಬವನ್ನು ಆಚರಿಸಲಾಗುತ್ತಿದೆ.

ಕಾಂಗ್ರೆಸ್ ಪಕ್ಷಕ್ಕೆ ಅವರ ಕೊಡುಗೆ ಅಪಾರವಾಗಿದೆ ಮುಂದಿನ ದಿನಗಳಲ್ಲಿ ಅವರಿಗೆ ಇನ್ನಷ್ಟು ರಾಜಕೀಯ ಭವಿಷ್ಯ ಉಜ್ವಲವಾಗಲಿ, ಅವರ ಸೇವೆ ನಾಡಿಗೆ, ದೇಶಕ್ಕೆ ಸಲ್ಲಲಿ ಎಂದು ಆಶಿಸಿದರು.

ಸಾಮಾನ್ಯ ಕಾರ್ಯಕರ್ತನಿಂದ ಆರಂಭವಾದ ಅವರ ರಾಜಕೀಯ ಜೀವನ, ಇಂದು ಎಐಸಿಸಿ ಅಧ್ಯಕ್ಷರಾಗಿ ಕಾಂಗ್ರೆಸ್ ಪಕ್ಷದ ಉನ್ನತ ಸ್ಥಾನಮಾನ ಗಳಿಸಿದ್ದಾರೆ. ಮುಂದಿನ ದಿನಗಳಲ್ಲಿ ಇನ್ನೂ ಅತ್ಯುನ್ನತ ಸ್ಥಾನಮಾನಗಳಿಸಿ ಜನರ ಸೇವೆ ಮಾಡುವ ಶಕ್ತಿಯನ್ನು ದೇವರು ಕರುಣಿಸಲಿ ಹಾಗೂ ಅವರಿಗೆ ಉತ್ತಮ ಆರೋಗ್ಯ ನೀಡಲಿ ಎಂದು ಅವರ ಹುಟ್ಟು ಹಬ್ಬಕ್ಕೆ ಶುಭ ಹಾರೈಸಿದರು.

ಈ ಸಂದರ್ಭದಲ್ಲಿ ಕಾಂಗ್ರೆಸ್ ಮುಖಂಡರಾದ ನಾಯಕರ ಹಳ್ಳಿ ಅಶೋಕ್, ವೆಂಕಟೇಶ್, ರಮೇಶ್, ಕರುಣಾಕರ ಅತ್ನಿ, ಸುನಿಲ್, ಶಂಕರ್, ಹರ್ಷ ಮೊದಲಾದವರಿದ್ದರು.

# ವಿದ್ಯಾವಿಕಾಸ ಯೋಜನೆಯಡಿ ಶೂ, ಸಾಕ್ಸ್ ವಿತರಣೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ಸರ್ಕಾರಿ ಶಾಲೆಗಳ ಸರ್ವತೋಮುಖ ಅಭಿವೃದ್ಧಿಗೆ ಹಳೆಯ ವಿದ್ಯಾರ್ಥಿಗಳ ಪಾತ್ರ ಅತ್ಯಂತ ಮಹತ್ವದ್ದಾಗಿದೆ ಎಂದು ಶಾಸಕ ಸಿ.ಎನ್. ಬಾಲಕೃಷ್ಣ ಹೇಳಿದರು.

ಪಟ್ಟಣದ ಮಾಧ್ಯಮಿಕ ಶಾಲಾ ಆವರಣದಲ್ಲಿರುವ ಪಿಎಂಶ್ರೀ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ತಾಲೂಕಿನ ಸರ್ಕಾರಿ ಶಾಲೆಗಳ ವ್ಯಾಸಂಗ ಮಾಡುತ್ತಿರುವ 1 ರಿಂದ 10ನೇ ತರಗತಿಯ 9271ವಿದ್ಯಾರ್ಥಿಗಳಿಗೆ ವಿದ್ಯಾವಿಕಾಸ ಯೋಜನೆಯಡಿ ಶೂ, ಸಾಕ್ಸ್, ವಿತರಣೆ ಚಾಲನೆ ನೀಡಿ ಅವರು ಮಾತನಾಡಿ, ಶಾಲಾ ಶಿಕ್ಷಣದ ಸಾರ್ವತ್ರೀಕರಣ ಬೇಡಿಕೆ ಸಾಕಾರಗೊಳ್ಳಬೇಕಾದರೆ ಸಮುದಾಯದ ಪಾಲ್ಗೊಳ್ಳುವಿಕೆ ನಿರ್ಣಾಯಕ ಪಾತ್ರವಹಿಸುತ್ತದೆ ಎಂದರು.

ವ್ಯಾಸಂಗ ಮಾಡಿದ ಶಾಲೆ ಅಭಿವೃದ್ಧಿಗೆ ಕೊಠಡಿ, ಶೌಚಾಲಯ ಮುಂತಾದ ಕೊಡುಗೆ ಹಳೇ ವಿದ್ಯಾರ್ಥಿಗಳು ನೀಡಬೇಕು. ಇದರಿಂದ ಸರ್ಕಾರಿ ಶಾಲೆಗಳ ಉನ್ನತೀಕರಣವಾಗುವ ಜತೆಗೆ ಸಮಸ್ಯೆಗಳು ನಿವಾರಣೆಯಾಗುತ್ತವೆ. ಸರ್ಕಾರಿ ಶಾಲೆಯಲ್ಲಿ ಓದಿ ಉನ್ನತ ಹುದ್ದೆ ಅಲಂಕರಿಸಿರುವ ಹಳೆ ವಿದ್ಯಾರ್ಥಿಗಳನ್ನು




ಗುರುತಿಸಿ ಶಿಕ್ಷಕರು ಶಾಲಾ ಅಭಿವೃದ್ಧಿಗೆ ಪ್ರೋತ್ಸಾಹ ನೀಡಬೇಕು ಎಂದು ತಿಳಿಸಿದರು

ಅವರು ಓದಿದ ಶಾಲೆಗೆ ಮರಳಿ ನೆರವು ನೀಡುವುದು, ಮೂಲಭೂತ ಸೌಕರ್ಯಗಳನ್ನು ಒದಗಿಸುವುದು ಮತ್ತು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡುವುದರಿಂದ ಗ್ರಾಮೀಣ ಭಾಗದ ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸಲು ಸಾಧ್ಯವಾಗುತ್ತದೆ. ಶಿಕ್ಷಣದಿಂದ ಮಾತ್ರ ಸಮಾಜಕ್ಕೆ ಉತ್ತಮ ನಾಗರಿಕರನ್ನು ನೀಡಲು ಸಾಧ್ಯ. ಪಾಲಕರು ಶಿಕ್ಷಕರಿಗೆ ಸಹಕಾರ ನೀಡಿದರೆ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡಬಹುದು ಎಂದು ಸಲಹೆ ನೀಡಿದರು.

ಪ್ರತಿಯೊಂದು ಗ್ರಾಮ ಪಂಚಾಯಿತಿಯಲ್ಲಿ ಒಂದರಿಂದ 10ನೇ ತರಗತಿವರೆಗೂ ಎಲ್ಲಾ ಸೌಕರ್ಯಗಳಿರುವ ಸುಸಜ್ಜಿತ ಶಾಲೆ ನಿರ್ಮಾಣವಾಗುವುದು ಗ್ರಾಮೀಣ ಭಾಗದ ಮಕ್ಕಳ ಭವಿಷ್ಯದ ದೃಷ್ಟಿಯಿಂದ ಅತ್ಯಂತ ಅಗತ್ಯವಾಗಿದೆ. ಎಲ್ಲಾ ವಿಷಯಗಳಿಗೂ ನುರಿತ ಶಿಕ್ಷಕರಿಂದ ಬೋಧನೆ, ಆಟದ ಮೈದಾನ, ಸ್ಮಾರ್ಟ್ ತರಗತಿಗಳು, ಶೌಚಾಲಯ, ಶುಚಿ-ರುಚಿಯಾದ ಬಿಸಿಯೂಟದೊಂದಿಗೆ ಸುತ್ತಮುತ್ತಲಿನ ಹಳ್ಳಿಗಳ ಮಕ್ಕಳನ್ನು ಶಾಲೆಗೆ ಕರೆದುಕೊಂಡು ಬರಲು ಮತ್ತು ಪುನಃ ಮನೆಗೆ ತಲುಪಿಸಲು ವಾಹನ ವ್ಯವಸ್ಥೆಯೊಂದಿಗೆ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಇಂತಹ ಶಾಲೆಗಳು ನಿರ್ಮಾಣವಾದರೆ, ಗ್ರಾಮೀಣ ಭಾಗದ ಮಕ್ಕಳು ನಗರ ಪ್ರದೇಶದ ಖಾಸಗಿ ಶಾಲೆಗಳ ಪೈಪೋಟಿಗೆ ಸರಿಸಮಾನವಾಗಿ ಬೆಳೆಯಲು ಸಾಧ್ಯವಾಗುತ್ತದೆ ಎಂದುರು.

ಶಿಕ್ಷಕರು ಶಿಕ್ಷಣವನ್ನು ನೀಡುವುದರ ಜತೆಗೆ ವಿದ್ಯಾರ್ಥಿಗಳಿಗೆ ಸಂಸ್ಕಾರವನ್ನು ಕಲಿಸಿ, ಸಮಾಜದಲ್ಲಿ ಸುಂದರ ಬದುಕು ಕಟ್ಟಿಕೊಳ್ಳವಂತೆ ಮಾಡಬೇಕು. ಮಕ್ಕಳಿಗೆ ಕೇವಲ ಪುಸ್ತಕದ ಜ್ಞಾನ ನೀಡಿದರೆ ಸಾಲದು, ಅದರೊಂದಿಗೆ ಜೀವನದ ಮೌಲ್ಯಗಳನ್ನು ಕಲಿಸುವ ನೀತಿ ಪಾಠ ಕೂಡ ಅತ್ಯಗತ್ಯ. ಇದು ಅವರ ಉತ್ತಮ ವ್ಯಕ್ತಿತ್ವ ರೂಪಿಸಲು ಸಹಾಯ ಮಾಡುತ್ತದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ ಸತೀಶ್. ಹೆಚ್.ಹೆಚ್ ಯೋಜನೆಯ ವಿವರಣೆ ನೀಡಿದರು. ಕ್ಷೇತ್ರ ಸಂಪನ್ಮೂಲ ಸಮನ್ವಯ ಅಧಿಕಾರಿ ಅನಿಲ್ ಕೆ.ಎನ್. ಪ್ರಾಸ್ತಾವಿಕವಾಗಿ ಮಾತನಾಡಿದರು, ಪುರಸಭಾ ಮಾಜಿ ಅಧ್ಯಕ್ಷ ಬನಶಂಕರಿ ರಘು, ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ಉಮಾ ಶಂಕರ್, ಶಿಕ್ಷಣ ಸಂಯೋಜಕರಾದ ಲೋಕೇಶ್, ಶ್ರೀನಿವಾಸ್, ಕರಿಯಪ್ಪ ಗೌಡ, ಯಾದವರಾಜು, ಸಮೂಹ ಸಂಪನ್ಮೂಲ ವ್ಯಕ್ತಿ ಲಿಂಗರಾಜು, ಪಿಎಂಶ್ರೀ ಶಾಲೆಯ ಶಾಲೆಯ ಮುಖ್ಯ ಶಿಕ್ಷಕ ಸುರೇಶ್.ಬಿ.ಎಂ ಸೇರಿದಂತೆ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

# ಹನುಮಂತಪುರದಲ್ಲಿ ಅಮಾನವೀಯ ವರ್ತನೆ

## ರೋಗಿಯನ್ನು ಕರೆದೊಯ್ಯುತ್ತಿದ್ದ ಆಂಬುಲೆನ್ಸ್ ಚಾಲಕನ ಮೇಲೆ ಪಾನಮತ್ತ ವ್ಯಕ್ತಿಯಿಂದ ಹಲ್ಲೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ತುರ್ತು ಚಿಕಿತ್ಸೆಯ ಅಗತ್ಯವಿದ್ದ ರೋಗಿಯನ್ನು ಆಸ್ಪತ್ರೆಯಿಂದ ಕರೆದೊಯ್ಯುತ್ತಿದ್ದ ವೇಳೆ, ಹಾಸನದಿಂದ ಮೈಸೂರಿಗೆ ಅರಕಲಗೂಡು ಮಾರ್ಗವಾಗಿ ತೆರಳುತ್ತಿದ್ದ ಆಂಬುಲೆನ್ಸ್ ಚಾಲಕನ ಮೇಲೆ ಪಾನಮತ್ತ ವ್ಯಕ್ತಿಯೊಬ್ಬ ಹಲ್ಲೆ ನಡೆಸಿದ ಘಟನೆ ಹನುಮಂತಪುರದಲ್ಲಿ ನಡೆದಿದೆ.

ಆಂಬುಲೆನ್ಸ್‌ನಲ್ಲಿ ತುರ್ತು ಚಿಕಿತ್ಸೆಯ ಅಗತ್ಯವಿದ್ದ ರೋಗಿಯಿದ್ದರೂ, ಅದನ್ನು ಲೆಕ್ಕಿಸದೆ ಪಾನಮತ್ತ ವ್ಯಕ್ತಿಯೊಬ್ಬ ಚಾಲಕನೊಂದಿಗೆ ಏಕಾಏಕಿ ವಾಗ್ವಾದಕ್ಕಿಳಿದು ಬಳಿಕ ಹಲ್ಲೆ ನಡೆಸಿದ್ದಾನೆ ಎಂದು ತಿಳಿದುಬಂದಿದೆ. ಈ ಅಚಾತುರ್ಯದಿಂದಾಗಿ ಆಂಬುಲೆನ್ಸ್



ಚಾಲಕ ಆತಂಕಕ್ಕೊಳಗಾಗಿದ್ದು, ಕೆಲಕಾಲ ವಾಹನ ಸಂಚಾರಕ್ಕೂ ತೊಂದರೆ ಉಂಟಾಯಿತು.

ರೋಗಿಗಳ ಜೀವ ಉಳಿಸುವ ನಿಟ್ಟಿನಲ್ಲಿ ಪ್ರಾಣದ ಹಂಗು ತೊರೆದು ಕರ್ತವ್ಯ ನಿರ್ವಹಿಸುವ ಆಂಬುಲೆನ್ಸ್ ಸಿಬ್ಬಂದಿಗೆ ಸೂಕ್ತ ಭದ್ರತೆ ಒದಗಿಸಬೇಕು. ಇಂತಹ ಕೃತ್ಯಗಳಿಗೆ ಕಡಿವಾಣ ಹಾಕಲು ಸಂಬಂಧಪಟ್ಟ ಅಧಿಕಾರಿಗಳು ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಸಾರ್ವಜನಿಕರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

# ಸಹಾಯಕ ತಾಂತ್ರಿಕ ವ್ಯವಸ್ಥಾಪಕರ ಹುದ್ದೆ ನೇಮಕಾತಿಗೆ ಅರ್ಜಿ ಆಹ್ವಾನ

ಹಾಸನ : ಕೃಷಿ ತಂತ್ರಜ್ಞಾನ ನಿರ್ವಹಣಾ ಸಂಸ್ಥೆ ಯೋಜನೆಯಡಿ 2026-27 ನೇ ಸಾಲಿನ ಹಾಸನ ಜಿಲ್ಲೆಯ (ಆಲೂರು ಮತ್ತು ಅರಕಲಗೂಡುನಲ್ಲಿ ತಲಾ 2 ಹುದ್ದೆ, ಅರಸೀಕೆರೆ, ಬೇಲೂರು, ಚನ್ನರಾಯಪಟ್ಟಣ, ಹಾಸನ, ಹೊಳೆನರಸೀಪುರ, ಸಕಲೇಶಪುರ, ಜಂಟಿ ಕೃಷಿ ನಿರ್ದೇಶಕರ ಕಚೇರಿ ಹಾಸನ ಇಲ್ಲಿ ತಲಾ 2 ಹುದ್ದೆ ಒಟ್ಟು 11 ಸಹಾಯಕ ತಾಂತ್ರಿಕ ವ್ಯವಸ್ಥಾಪಕರು ಹುದ್ದೆಗೆ ನೇರಗುತ್ತಿಗೆ ಆಧಾರದ ಮೇಲೆ ಸೀಮಿತ ಅವಧಿಗೆ ನೇಮಕಾತಿ ಮಾಡಿಕೊಳ್ಳಲು ಷರತ್ತಿಗೆ ಒಳಪಟ್ಟು ಅರ್ಜಿ ಆಹ್ವಾನಿಸಲಾಗಿದೆ ಎಂದು ಹಾಸನ ಜಂಟಿ ಕೃಷಿ ನಿರ್ದೇಶಕರು ತಿಳಿಸಿದ್ದಾರೆ.

ಸಹಾಯಕ ತಾಂತ್ರಿಕ ವ್ಯವಸ್ಥಾಪಕರು ಹುದ್ದೆಗೆ ಅರ್ಹ ಅಭ್ಯರ್ಥಿಗಳು ಕೃಷಿ / ಕೃಷಿ ಸಂಬಂಧಿತ ವಿಶ್ವ ವಿದ್ಯಾನಿಲಯಗಳು ನೀಡುವ ಕೃಷಿ ಸ್ನಾತಕ ಪಧವಿಯೊಂದಿಗೆ ಕಂಪ್ಯೂಟರ್ ಜ್ಞಾನ ಹೊಂದಿದ್ದು, ಕನಿಷ್ಠ 2 ವರ್ಷಗಳ ಕೃಷಿ/ಕೃಷಿ ಸಂಬಂಧಿತ ವಿಭಾಗಗಳಲ್ಲಿ ಕ್ಷೇತ್ರ ಮಟ್ಟದ ಅನುಭವ ಹೊಂದಿರಬೇಕು

# ರಾಷ್ಟ್ರಧ್ವಜದ ಗೌರವದ ಕುರಿತು ಮಾಹಿತಿ ಕಾರ್ಯಾಗಾರ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ರಾಷ್ಟ್ರಧ್ವಜ ಅಂಗೀಕಾರ ದಿನಾಚರಣೆಯ ಅಂಗವಾಗಿ ಭಾರತ ಸೇವಾದಳದ ಜಿಲ್ಲಾ ಸಮಿತಿ ಹಾಗೂ ಪದವಿಪೂರ್ವ ಶಿಕ್ಷಣ ಇಲಾಖೆಯ ಸಹಯೋಗದಲ್ಲಿ ಹಾಸನದಲ್ಲಿ ಪ್ರಾಂಶುಪಾಲರಿಗಾಗಿ ಮಾಹಿತಿ ಕಾರ್ಯಾಗಾರ ಮತ್ತು ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಯಶಸ್ವಿಯಾಗಿ ಆಯೋಜಿಸಲಾಯಿತು.

ಪದವಿಪೂರ್ವ ಶಿಕ್ಷಣ ಇಲಾಖೆ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಇಲಾಖೆಯ ಉಪನಿರ್ದೇಶಕ ಗಂಗಾಧರ್ ವಹಿಸಿದ್ದರು. ಕಾರ್ಯಕ್ರಮದಲ್ಲಿ ಪ್ರಾಂಶುಪಾಲರ ಸಂಘದ ಅಧ್ಯಕ್ಷ ಪ್ರಶಾಂತ್ ಕುಮಾರ್, ಕಾರ್ಯದರ್ಶಿ ತಿಮ್ಮೇಗೌಡ, ರಾಜ್ಯ ಸಂಘದ ಉಪಾಧ್ಯಕ್ಷ ದೇವರಾಜು, ಖಜಾಂಚಿ ಚೌಡಯ್ಯ ಕಟ್ನವಾಡಿ, ಯುವಜನ ಸೇವಾಧಿಕಾರಿ ನಿತ್ಯ ಸೇರಿದಂತೆ ಇಲಾಖೆಯ ಅಧಿಕಾರಿಗಳು ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

ಕಾರ್ಯಕ್ರಮದ ಅಂಗವಾಗಿ ಶ್ರೀ ಮಹಾಲಕ್ಷ್ಮಿ ಮಂಜಪ್ಪ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯ ವೈದ್ಯ ಡಾ. ಉಮೇಶ್ ಹಾಗೂ ತಂಡದ ವತಿಯಿಂದ ಉಚಿತ ಆರೋಗ್ಯ ತಪಾಸಣಾ ಶಿಬಿರ ನಡೆಯಿತು. ಇದೇ ವೇಳೆ ಸುನಂದ ನೇತ್ರ ಚಿಕಿತ್ಸಾಲಯದ ನೇತ್ರ ತಜ್ಞ ಡಾ. ಚಿರಂತ್ ಹಾಗೂ ತಂಡದ ವತಿಯಿಂದ ಉಚಿತ ನೇತ್ರ ತಪಾಸಣೆಯನ್ನೂ ನಡೆಸಲಾಯಿತು.




### ಸನ್ಮಾನ-ಸೇವಾದಳದ ಪಾತ್ರ

ಕಾರ್ಯಕ್ರಮದಲ್ಲಿ ಭಾರತ ಸೇವಾದಳದ ಹೊಳೆನರಸೀಪುರ ತಾಲೂಕು ಸಮಿತಿಯ ಸದಸ್ಯೆ ಹಾಗೂ ನಿವೃತ್ತ ಪ್ರಾಂಶುಪಾಲೆ ಜಯಶೀಲಮ್ಮ ಅವರನ್ನು ಶಿಕ್ಷಣ ಕ್ಷೇತ್ರದಲ್ಲಿ ಸಲ್ಲಿಸಿದ ಸೇವೆ ಹಾಗೂ ಭಾರತ ಸೇವಾದಳಕ್ಕೆ ನೀಡಿದ ಕೊಡುಗೆಯನ್ನು ಗುರುತಿಸಿ ಸನ್ಮಾನಿಸಲಾಯಿತು.

ಜಿಲ್ಲೆಯ ಸುಮಾರು 180ಕ್ಕೂ ಹೆಚ್ಚು ಪದವಿಪೂರ್ವ ಕಾಲೇಜುಗಳ ಪ್ರಾಂಶುಪಾಲರು ಕಾರ್ಯಾಗಾರ ಹಾಗೂ ಆರೋಗ್ಯ ತಪಾಸಣಾ ಶಿಬಿರದಲ್ಲಿ ಉತ್ಸಾಹದಿಂದ ಭಾಗವಹಿಸಿ ಪ್ರಯೋಜನ ಪಡೆದರು. ಜಯಶೀಲಮ್ಮ ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು. ದೇವರಾಜು

> "ವಿದ್ಯಾರ್ಥಿಗಳಲ್ಲಿ ಶಿಸ್ತು, ದೇಶಭಕ್ತಿ ಹಾಗೂ ಸಾಮಾಜಿಕ ಸೇವಾ ಮನೋಭಾವ ಬೆಳೆಸುವಲ್ಲಿ ಭಾರತ ಸೇವಾದಳದ ಪಾತ್ರ ಮಹತ್ವದ್ದಾಗಿದೆ. ಜಿಲ್ಲೆಯ ಪ್ರತಿಯೊಂದು ಪದವಿಪೂರ್ವ ಕಾಲೇಜಿನಲ್ಲೂ ಸೇವಾದಳದ ಘಟಕಗಳನ್ನು ಬಲಪಡಿಸಲು ಪ್ರಾಂಶುಪಾಲರು ಸಕ್ರಿಯವಾಗಿ ಸಹಕರಿಸಬೇಕು."
>
> **- ಗಂಗಾಧರ್, ಉಪನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ**


ವಂದನಾರ್ಪಣೆ ಸಲ್ಲಿಸಿದರು. ರಾಷ್ಟ್ರಗೀತೆಯೊಂದಿಗೆ ಕಾರ್ಯಕ್ರಮ ಮುಕ್ತಾಯಗೊಂಡಿದ್ದು, ನಂತರ ಭಾಗವಹಿಸಿದ ಎಲ್ಲರಿಗೂ ಭೋಜನದ ವ್ಯವಸ್ಥೆ ಮಾಡಲಾಗಿತ್ತು.

### ಮುಖ್ಯಾಂಶಗಳು

- ರಾಷ್ಟ್ರಧ್ವಜ ಅಂಗೀಕಾರ ದಿನಾಚರಣೆ ಅಂಗವಾಗಿ ಹಾಸನದಲ್ಲಿ ಪ್ರಾಂಶುಪಾಲರಿಗಾಗಿ ವಿಶೇಷ ಕಾರ್ಯಾಗಾರ.
- ಕಾಲೇಜುಗಳಲ್ಲಿ ಸೇವಾದಳ ಘಟಕ ಬಲಪಡಿಸಲು ಹಾಗೂ ಧ್ವಜವಂದನೆ ವಿಧಾನ ಕುರಿತು ಜಾಗೃತಿ.
- ಶ್ರೀ ಮಹಾಲಕ್ಷ್ಮಿ ಮಂಜಪ್ಪ ಹಾಗೂ ಸುನಂದ ನೇತ್ರ ಆಸ್ಪತ್ರೆ ವತಿಯಿಂದ ಉಚಿತ ಆರೋಗ್ಯ ಹಾಗೂ ನೇತ್ರ ತಪಾಸಣೆ.

ಭಾರತ ಸೇವಾದಳದ ವಲಯ ಸಂಘಟಕಿ ರಾಣಿ ವಿ.ಎಸ್. ಅವರು ಸೇವಾದಳದ ಉದ್ದೇಶಗಳು ಹಾಗೂ ಕಾರ್ಯಚಟುವಟಿಕೆಗಳ ಕುರಿತು ಮಾಹಿತಿ ನೀಡಿದರು. ರಾಷ್ಟ್ರಧ್ವಜದ ಗೌರವ, ರಾಷ್ಟ್ರಗೀತೆಯ ಮಹತ್ವ ಹಾಗೂ ಧ್ವಜವಂದನೆ ನಡೆಸುವ ಸರಿಯಾದ ವಿಧಾನದ ಕುರಿತು ಪ್ರಾಂಶುಪಾಲರಿಗೆ ವಿಸ್ತೃತವಾಗಿ ವಿವರಿಸಿದರು. ವಿದ್ಯಾರ್ಥಿಗಳಲ್ಲಿ ರಾಷ್ಟ್ರಧ್ವಜದ ಕುರಿತು ಸರಿಯಾದ ಅರಿವು ಮೂಡಿಸುವ ಹೊಣೆಗಾರಿಕೆ ಶಿಕ್ಷಣ ಸಂಸ್ಥೆಗಳ ಮೇಲಿದೆ ಎಂದು ತಿಳಿಸಿದರು.

# ಜೀಕನ್ನಡದ ಡ್ಯಾನ್ಸ್ ಕರ್ನಾಟಕ ಡ್ಯಾನ್ಸ್ ಸೂಪರ್ ಮಾಮ್ ಶೋ ಆಡಿಷನ್ ಹಾಸನದಲ್ಲಿ ಇದೇ ಶುಕ್ರವಾರದಂದು




ಕನ್ನಡದ ಟಿ.ವಿ ಇತಿಹಾಸದಲ್ಲಿ ಅತೀಹೆಚ್ಚು ಜನಮನ್ನಣೆ ಗಳಿಸಿದ ಡ್ಯಾನ್ಸಿಂಗ್ ರಿಯಾಲಿಟಿ ಶೋ ಅಂದ್ರೆ ಅದು ಡ್ಯಾನ್ಸ್ ಕರ್ನಾಟಕ ಡ್ಯಾನ್ಸ್ . ಮಕ್ಕಳಿಂದ, ಸೆಲೆಬ್ರಿಟಿ ಗಳ ವರೆಗೆ ಎಲ್ಲರೂ ಈ ಶೋನಲ್ಲಿ ಭಾಗವಹಿಸಿ ಜನರನ್ನು ಮನರಂಜಿಸಿದ್ದಾರೆ. ಈಗ ಕರ್ನಾಟಕದ ಅಮ್ಮಂದಿರ ಸರಣಿ. ಕನ್ನಡಿಗರನ್ನು ಕುಣಿಸಿ, ಮನರಂಜಿಸಲು ಡ್ಯಾನ್ಸ್ ಕರ್ನಾಟಕ ಡ್ಯಾನ್ಸ್ ಸೂಪರ್ ಮಾಮ್ ಶೋ ಅತೀ ಶೀಘ್ರದಲ್ಲಿ ಶುರುವಾಗಲಿದ್ದು ಇದರ ಆಡಿಷನ್ ಇದೇ ತಿಂಗಳ 24 ರಿಂದ ನಡೆಯಲಿದೆ.

ಮನೆ, ಆಫೀಸ್, ಗಂಡ, ಮಕ್ಕಳು, ಅತ್ತೆ, ಮಾವ ಹೀಗೆ ಸದಾ ಪರರಿಗೋಸ್ಕರ ದುಡಿಯುವ ಅಮ್ಮಂದಿರಿಗೆ ಇದೊಂದು ಉತ್ತಮ ಅವಕಾಶ, ಡ್ಯಾನ್ಸ್ ಬಗ್ಗೆ ಆಸಕ್ತಿ ಇರುವ, ಚೆನ್ನಾಗಿ ಹೆಜ್ಜೆ ಹಾಕಬಲ್ಲ ಅಮ್ಮಂದಿರು ಈ ಆಡಿಷನ್ ನಲ್ಲಿ ಭಾಗವಹಿಸಬಹುದಾಗಿದೆ. ಹಾಗೆಯೇ ಈ ಆಡಿಷನ್ ನಲ್ಲಿ ಭಾಗವಹಿಸಲು ಪಾಸ್ಪೋರ್ಟ್ ಸೈಜ್ ಫೋಟೋ, ಅಡ್ರೆಸ್ ಪ್ರೂಫ್ ಜೆರಾಕ್ಸ್ ಕಡ್ಡಾಯ.

ಕನ್ನಡ ಪೋಸ್ಟ್

E-mail : kannadapostnews@gmail.com facebook.com / ಕನ್ನಡ post



# ಹೇಮಾವತಿ ಜಲಾಶಯ ನೀರು ಕೃಷಿಗೆ ಬಳಸದಂತೆ ಸೂಚನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಹೇಮಾವತಿ ಜಲಾನಯನ ಪ್ರದೇಶ ವ್ಯಾಪ್ತಿಯಲ್ಲಿ ವಾಡಿಕೆಗಿಂತ ಕಡಿಮೆ ಮಳೆಯಾಗಿರುವುದರಿಂದ ಜಲಾಶಯದಲ್ಲಿ ಲಭ್ಯವಿರುವ ನೀರನ್ನು ಕೃಷಿ ಚಟುವಟಿಕೆಗೆ ಉಪಯೋಗಿಸಲು ಸಾಧ್ಯವಿಲ್ಲ ಎಂದು ಹೇಮಾವತಿ ಜಲಾಶಯ ಯೋಜನೆ ಕುಡಿಯುವ ನೀರಿನ ಸಲಹಾ ಸಮಿತಿ ಸದಸ್ಯ ಕಾರ್ಯದರ್ಶಿ ತಿಳಿಸಿದ್ದಾರೆ.

ಜಲಾಶಯದಲ್ಲಿ ಪ್ರಸ್ತುತ 18.224 ಟಿ.ಎಂ.ಸಿ ನೀರು ಮಾತ್ರ ಬಳಕೆಗೆ ಲಭ್ಯವಿದೆ. ಈ ಪರಿಸ್ಥಿತಿಯನ್ನು ಅವಲೋಕಿಸಿ ಜಲಾಶಯದಲ್ಲಿ ಲಭ್ಯವಿರುವ ನೀರನ್ನು ಮುಂದಿನ ದಿನಗಳಲ್ಲಿ ಕುಡಿಯುವ ನೀರಿನ ಉದ್ದೇಶಕ್ಕಾಗಿ ಮಾತ್ರ ಸದ್ಬಳಕೆ ಮಾಡಬೇಕಾಗಿದೆ. ಈ ನಿಟ್ಟಿನಲ್ಲಿ ಹೇಮಾವತಿ ಜಲಾಶಯ ವ್ಯಾಪ್ತಿಯ ಅಚ್ಚುಕಟ್ಟುದಾರರು, ರೈತರು, ಹೇಮಾವತಿ ಜಲಾಶಯದ ನೀರನ್ನು ಅವಲಂಬಿತರಾಗಿ ಯಾವುದೇ ಬೆಳೆಗಳನ್ನು ಬೆಳೆಯದಂತೆ ಸೂಚನೆ ನೀಡಲಾಗಿದೆ.



ಜಲಾಶಯಗಳಲ್ಲಿ ಶೇಖರಣೆಯಾಗಿರುವ ನೀರನ್ನು ಕುಡಿಯುವ ನೀರಿಗೆ ತೊಂದರೆ ಉಂಟಾದ ಸಂದರ್ಭದಲ್ಲಿ ಬಳಸಿಕೊಳ್ಳಲು ನಿರ್ಧಾರ ತೆಗೆದುಕೊಳ್ಳುವ ನಿಟ್ಟಿನಲ್ಲಿ ಅನಗತ್ಯ ವಿಳಂಬವನ್ನು ತಪ್ಪಿಸುವ ಉದ್ದೇಶದಿಂದ 2014 ರಲ್ಲಿ ಪ್ರಾದೇಶಿಕ ಆಯುಕ್ತರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಲಾಗಿದೆ. ಆ ಪ್ರಕಾರ ಜಲಸಂಪನ್ಮೂಲ ಇಲಾಖೆಯಡಿ ಜಲಾಶಯಗಳಲ್ಲಿ ಸಂಗ್ರಹಿಸಿರುವ ನೀರನ್ನು ಬೇಸಿಗೆಯಲ್ಲಿ ಅಥವಾ ನೀರಿನ ಅಭಾವವಿರುವ ಪರಿಸ್ಥಿತಿಯಲ್ಲಿ ವ್ಯವಸ್ಥಿತವಾಗಿ ಕುಡಿಯುವ ಉದ್ದೇಶಕ್ಕಾಗಿ ಮಾತ್ರ ಬಳಸಲು ನಿರ್ಧರಿಸಲು ಆದೇಶವಾಗಿದೆ.

ಈ ಆದೇಶದನ್ವಯ ರಾಷ್ಟ್ರೀಯ ಹಾಗೂ ರಾಜ್ಯ ಜಲ ನೀತಿ ಅನ್ವಯ ಕುಡಿಯುವ ನೀರಿಗೆ ಪ್ರಥಮ ಆದ್ಯತೆ ನೀಡಬೇಕಿರುವ ಕಾರಣ ಜಲಾಶಯದಲ್ಲಿ ಪ್ರಸ್ತುತ ಲಭ್ಯವಿರುವ ನೀರನ್ನು ಮುಂಬರುವ ದಿನಗಳಲ್ಲಿ ಕುಡಿಯುವ ನೀರಿನ ತೊಂದರೆ ಉಂಟಾಗದಂತೆ ಕಾಯ್ದಿರಿಸಿಕೊಂಡು ಬಳಸಲು ಈಗಾಗಲೇ ಸೂಚನೆ ನೀಡಲಾಗಿದೆ.

### ಎಲ್ ನಿನೊ ಪರಿಣಾಮ

ರಾಜ್ಯಾದ್ಯಂತ ಬಹುತೇಕ ಜಲಾಶಯಗಳ ಒಳಹರಿವು ಶೂನ್ಯಕ್ಕೆ ಇಳಿದಿದ್ದು ಹಾಗೂ ಎಲ್ ನಿನೊ ಪರಿಣಾಮದಿಂದ ಉಂಟಾಗಲಿರುವ ಬರದ ಪರಿಸ್ಥಿತಿ ಹಾಗು ಪರಿಣಾಮಗಳ ಬಗ್ಗೆ ಸಚಿವ ಸಂಪುಟ ಸಭೆಯಲ್ಲಿ ಸುದೀರ್ಘ ಚರ್ಚೆಯ ನಂತರ ಜಲಾಶಯ ನಂಬಿಕೊಂಡು ಯಾವ ರೈತರು ಬೆಳೆ ಹಾಕಬೇಡಿ ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನಿರ್ದೇಶನ ನೀಡಿದ್ದಾರೆ. ಪ್ರಸ್ತುತ ಜಲಾಶಯಗಳಲ್ಲಿನ ನೀರನ್ನು ಕಡ್ಡಾಯವಾಗಿ ಕುಡಿಯುವ ನೀರಿಗೆ ಮಾತ್ರ ಕಾಯ್ದಿರಿಸಬೇಕಾಗಿರುವ ಪರಿಸ್ಥಿತಿ ಉದ್ಭವವಾಗಿರುವ ಕಾರಣ ಎಲ್ಲಾ ಜಲಾಶಯಗಳ ನೀರಾವರಿ ಸಲಹಾ ಸಮಿತಿಯ ಸದಸ್ಯ ಕಾರ್ಯದರ್ಶಿಗಳು ಪ್ರಸಕ್ತ ಸಾಲಿನಲ್ಲಿ ಜಲಾಶಯಗಳನ್ನು ನಂಬಿಕೊಂಡು ಬೆಳೆಯನ್ನು ಬೆಳೆಯದಂತೆ ರೈತರಲ್ಲಿ ಮನವಿ ಮಾಡಿದ್ದಾರೆ.

# ಸಚಿವ ಸಂಪುಟ ವಿಸ್ತರಣೆ ಲಿಂಗಾಯತರ ಪರಿಗಣನೆಗೆ ಆಗ್ರಹ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಅರಸೀಕೆರೆ: ಸಚಿವ ಸಂಪುಟ ವಿಸ್ತರಣೆ ವೇಳೆ ಕಾಂಗ್ರೆಸ್ ಹೈಕಮಾಂಡ್ ಹಳೆ ಮೈಸೂರು ಪ್ರಾಂತ್ಯದ ವೀರಶೈವ ಲಿಂಗಾಯತ ಸಮುದಾಯದ ಶಾಸಕರಿಗೆ ಅವಕಾಶ ಕಲ್ಪಿಸಬೇಕು ಎಂದು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ತಾಲೂಕು ಅಧ್ಯಕ್ಷ ಶೇಖರ್ ಸಂಕೋಡನಹಳ್ಳಿ ಒತ್ತಾಯಿಸಿದ್ದಾರೆ.

ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ತರುವಲ್ಲಿ ಸಮುದಾಯದ ಕೊಡುಗೆ ದೊಡ್ಡದು ಎಂಬುದನ್ನು ಕೈ ನಾಯಕರು, ವರಿಷ್ಠರು ಮರೆಯಬಾರದು. ಮಾಜಿ ಮುಖ್ಯಮಂತ್ರಿ ದಿ.ವೀರೇಂದ್ರ ಪಾಟೀಲ್ ಬಳಿಕ ಯಾವುದೇ ಉನ್ನತ ಸ್ಥಾನ ಬೇರೊಬ್ಬರಿಗೆ ದೊರೆತಿಲ್ಲ. ಹಳೆಯ ಮೈಸೂರು ಭಾಗದಲ್ಲಿ ವೀರಶೈವ ಲಿಂಗಾಯತ ಸಮಾಜಕ್ಕೆ ದಶಕಗಳಿಂದ ಸೂಕ್ತ ಪ್ರಾತಿನಿಧ್ಯ ದೊರೆತಿಲ್ಲ. ತಿಪಟೂರು ಶಾಸಕ ಷಡಕ್ಷರಿ ಹಾಗೂ ಗುಂಡ್ಲುಪೇಟೆ ಶಾಸಕ ಗಣೇಶ್ ಪ್ರಸಾದ್ ಮಾತ್ರವೇ ವಿಧಾನಸಭೆ ಪ್ರವೇಶ ಮಾಡಿದ್ದಾರೆ. ಈ ಪೈಕಿ ಷಡಕ್ಷರಿ ಹಿರಿಯ ಶಾಸಕರಾಗಿದ್ದು ಸಚಿವರಾಗುವ ಎಲ್ಲ ಅರ್ಹತೆ ಹೊಂದಿದ್ದಾರೆ. ಹಾಗೆಯೇ ಮಾಜಿ ಸಚಿವ ದಿ.ಮಹದೇವ್ ಪ್ರಸಾದ್ ಪುತ್ರ ಗಣೇಶ್ ಪ್ರಸಾದ್ ಕೂಡಾ ಯುವ ಶಾಸಕರಿದ್ದಾರೆ.

ಸಾಮಾಜಿಕ ನ್ಯಾಯ ಕಲ್ಪಿಸುವ ಉದ್ದೇಶದಿಂದ ಇಬ್ಬರಿಗೂ ಸಚಿವ ಸಂಪುಟದಲ್ಲಿ ಅವಕಾಶ ಕೊಡಬೇಕು. ಇದರಿಂದ ವೀರಶೈವ ಲಿಂಗಾಯತ ಸಮುದಾಯಕ್ಕೆ ದೊಡ್ಡ ಶಕ್ತಿ ತುಂಬಿದಂತಾಗಲಿದೆ. ಕಾಂಗ್ರೆಸ್ ವಿಪಕ್ಷ ನಾಯಕ ರಾಹುಲ್ ಗಾಂಧಿ,ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಮಾಜಿ ಸಿಎಂ ಸಿದ್ದರಾಮಯ್ಯ, ಸಿಎಂ ಡಿ.ಕೆ.ಶಿವಕುಮಾರ್ ಸೇರಿದಂತೆ ಕಾಂಗ್ರೆಸ್ ಹೈಕಮಾಂಡ್ ಸೂಕ್ತ ನಿರ್ಧಾರ ತೆಗೆದುಕೊಳ್ಳಬೇಕು. ಕಾಂಗ್ರೆಸ್ ಅಧಿಕಾರಕ್ಕೆ ಬಂದು ಮೂರು ವರ್ಷ ಕಳೆದರೂ ವೀರಶೈವ ಲಿಂಗಾಯತ ಸಮುದಾಯದ ಜಿಲ್ಲೆಯ ಯಾವುದೇ ಮುಖಂಡರಿಗೆ ನಿಗಮ ಮಂಡಳಿ ಅಧ್ಯಕ್ಷ, ನಿರ್ದೇಶಕ ಸೇರಿದಂತೆ ಯಾವುದೇ ಬಗೆಯ ಉನ್ನತ ಹುದ್ದೆ ನೀಡದಿರುವುದು ಸರಿಯಲ್ಲ. ಮೂರ್ನಾಲ್ಕು ದಶಕಗಳಿಂದ ಪ್ರಾಮಾಣಿಕ ಕಾರ್ಯಕರ್ತರಂತೆ ದುಡಿದ ಹಲವರು ಅಧಿಕಾರ ಪಡೆಯಲು ಸಾಧ್ಯವಿಲ್ಲದಂತಾಗಿದೆ. ಸಚಿವ ಸಂಪುಟ ವಿಸ್ತರಣೆ ವೇಳೆ ಹಳೆ ಮೈಸೂರು ಭಾಗದ ವೀರಶೈವ ಲಿಂಗಾಯತ ಶಾಸಕರ ಕಡಗಣನೆ ಮಾಡುವುದು ಅಥವಾ ನಿರ್ಲಕ್ಷ್ಯ ತೋರಿದಲ್ಲಿ ಮುಂದಿನ ಚುನಾವಣೆಯಲ್ಲಿ ಬೆಲೆ ತರಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದ್ದಾರೆ.

# ಅರೇಹಳ್ಳಿಯಲ್ಲಿ ಅಗತ್ಯ ರಸಗೊಬ್ಬರ ದಾಸ್ತಾನು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರೇಹಳ್ಳಿ: ರೈತರಿಗೆ ಅನುಕೂಲವಾಗಬೇಕೆಂಬ ದೃಷ್ಟಿಯಿಂದ ಅಗತ್ಯ ರಸಗೊಬ್ಬರ ದಾಸ್ತಾನಿರಿಸದ್ದು ರೈತರು ಪ್ರಯೋಜನ ಪಡೆಯಬೇಕು ಎಂದು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ನಾಗೇಶ್ ಶೆಟ್ಟಿ ಹೇಳಿದರು.

ಬೇಲೂರು ತಾಲ್ಲೂಕಿನ ಅರೇಹಳ್ಳಿಯ ವಿನಾಯಕ ಸಮುದಾಯ ಭವನದಲ್ಲಿ ನಡೆದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ 202526ನೇ ಸಾಲಿನ 76ನೇ ವಾರ್ಷಿಕ ಮಹಾಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ನಮ್ಮ ಪತ್ತಿನ ಸಹಕಾರ ಸಂಘದಲ್ಲಿ ಚಿನ್ನದ ಅಡಮಾನ ಸಾಲದ ಬಡ್ಡಿ ದರ ರಾಷ್ಟ್ರೀಕೃತ ಬ್ಯಾಂಕ್‌ಗಳಿಗಿಂತ ಕಡಿಮೆಯಿದೆ. ಹೆಚ್‌ಡಿಸಿಸಿ ಬ್ಯಾಂಕ್



ಮೊದಲ ಹಂತದಲ್ಲಿ ರೈತರಿಗೆ 40 ಲಕ್ಷ ರೂ. ಸಾಲ ಮಂಜೂರು ಮಾಡಿದ್ದಾರೆ. ಎರಡನೇ ಹಂತದಲ್ಲಿ ಮಂಜೂರಾದ 70 ಲಕ್ಷ ರೂ. ಸಾಲವನ್ನು 214 ರೈತರಿಗೆ ಸಮಾನವಾಗಿ ಹಂಚಿಕೆ ಮಾಡಲಾಗಿದೆ ಎಂದು ಹೇಳಿದರು.

ಹೆಡಿಸಿಸಿ ಬ್ಯಾಂಕ್ ನಿರ್ದೇಶಕ ಎಂ.ಎ.ನಾಗರಾಜು ಮಾತನಾಡಿ, ಹಲವು ಏಳು ಬೀಳುಗಳನ್ನು ದಾಟಿ ಸಂಘವು 76ನೇ ವಸಂತಕ್ಕೆ ಕಾಲಿಟ್ಟಿದೆ. ಈ ಸಂಘವು ತಾಲ್ಲೂಕಿಗೆ ಮಾದರಿಯಾಗಿದೆ.

ಮಾಜಿ ಪ್ರಧಾನಿ ಹೆಚ್ .ಡಿ.ದೇವೇಗೌಡರು ಹಾಗೂ ಮಾಜಿ ಸಚಿವ ಹೆಚ್.ಡಿ.ರೇವಣ್ಣ ಅವರ ಆಶಯದಂತೆ ರೈತರ ಆರ್ಥಿಕ ಅಭಿವೃದ್ಧಿಗೆ ಸಹಕಾರ ಸಂಘಗಳು ಶ್ರಮಿಸುತ್ತಿವೆ ಎಂದು ಹೇಳಿದರು.

ಹೆಚ್‌ಡಿಸಿಸಿ ಬ್ಯಾಂಕ್ ಅಧ್ಯಕ್ಷ ಸೋಮನಹಳ್ಳಿ ನಾಗರಾಜು ಮಾತನಾಡಿ, 2004ರಿಂದ ರೈತರಿಗೆ ಬಡ್ಡಿ ರಹಿತ ಸಾಲ ನೀಡಲಾಗುತ್ತಿದೆ. ಜಿಲ್ಲೆಯ ಸಹಕಾರ ಸಂಘಗಳಿಗೆ ಪ್ರತಿವರ್ಷ 500 ಕೋಟಿ ರೂ. ಸಾಲ ವಿತರಿಸಲಾಗುತ್ತಿದೆ. ಈ ಸಹಕಾರ ವ್ಯವಸ್ಥೆಯನ್ನು ಇನ್ನಷ್ಟು ಅಭಿವೃದ್ಧಿಪಡಿಸಲು ರೈತರು ತಮ್ಮ ವ್ಯವಹಾರವನ್ನು ಪತ್ತಿನ ಸಹಕಾರ ಸಂಘದಲ್ಲಿಯೇ ನಡೆಸಬೇಕು ಎಂದು ಕರೆ ನೀಡಿದರು.

ಕಾರ್ಯಕ್ರಮದಲ್ಲಿ ಸಂಘದ ಉಪಾಧ್ಯಕ್ಷೆ ಕೆ.ಪಿ.ಗಾಯತ್ರಿ, ಸಿಇಒ ಚನ್ನಕೇಶವ, ನಿರ್ದೇಶಕರಾದ ತುಳಸಿದಾಸ್, ಚಂದ್ರಶೇಖರ್, ನಿಂಗರಾಜು, ಅನಂತರಾಜು, ಅಣ್ಣಪ್ಪ, ರಾಮಚಂದ್ರ, ಸುಹೇಲ್ ಉರ್ ರೆಹಮಾನ್, ಪುಟ್ಟರಾಜು, ಪದ್ಮ,ಚ ಹೇಮರಾಜು, ಬ್ಯಾಂಕ್ ಪ್ರತಿನಿಧಿ ಹರೀಶ್ ಇತರರಿದ್ದರು.

# ಎಸ್‌ಐಆರ್: ಚನ್ನರಾಯಪಟ್ಟಣದಲ್ಲಿ ಶೇ. 85.41 ರಷ್ಟು ಪ್ರಗತಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ಮತದಾರರ ಪಟ್ಟಿ ವಿಶೇಷ ಪರಿಷ್ಕರಣೆ (ಎಸ್ ಐಆರ್) ತಾಲ್ಲೂಕಿನಲ್ಲಿ ಶೇ. 85.41ರಷ್ಟು ಪ್ರಗತಿಯಾಗಿದೆ ಎಂದು ಶಾಸಕ ಸಿ.ಎನ್.ಬಾಲಕೃಷ್ಣ ಹೇಳಿದರು.

ಮಿನಿ ವಿಧಾನಸೌಧ ಸಭಾಂಗಣದಲ್ಲಿ ನಡೆದ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ಸಭೆಯಲ್ಲಿ ಮಾತನಾಡಿ, ಯಾವುದೇ ಒಬ್ಬ ಅರ್ಹ ಮತದಾರರು ಈ ವಿಶೇಷ ಸಮಗ್ರ ಪರಿಷ್ಕರಣೆಯ ಪಟ್ಟಿಯಿಂದ ಹೊರಗುಳಿಯಬಾರದು. ಭಾರತ ಸರ್ಕಾರದ ಮತ್ತು ಚುನಾವಣಾ ಆಯೋಗದ ಉತ್ತಮ ಕಾರ್ಯಕ್ರಮವಾಗಿದೆ. ಈ ವರೆಗೆ ತಾಲ್ಲೂಕಿನಲ್ಲಿ ಮತದಾರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಯು ಶೇ. 85.41 ರಷ್ಟು ಗುರಿ ತಲುಪಿದ್ದೇವೆ ಎಂದು ತಿಳಿಸಿದರು.



ಚನ್ನರಾಯಪಟ್ಟಣ ನಗರದಲ್ಲಿ ಎಸ್‌ಐಆರ್ ಪರಿಷ್ಕರಣೆ ಶೇ. 60ಕ್ಕಿಂತ ಕಡಿಮೆ ಆಗಿರುವುದರಿಂದ ಹೆಚ್ಚಿನ ಸಿಬ್ಬಂದಿ ನಿಯೋಜನೆ ಮಾಡಿ ನಿಗದಿತ ಅವಧಿಯೊಳಗೆ ಪೂರ್ಣಗೊಳಿಸಲು ಚುನಾವಣಾ ಅಧಿಕಾರಿಗೆ ಸಲಹೆ ನೀಡಿದ ಅವರು, ಜು. 29 ಅಥವಾ 30ರೊಳಗೆ ಶೇ. 100ರಷ್ಟು ಪರಿಷ್ಕರಣೆ ಮುಗಿಯಲಿದೆ ಎಂದು ಶಾಸಕ ವಿಶ್ವಾಸ ವ್ಯಕ್ತಪಡಿಸಿದರು.

ತಾಲ್ಲೂಕಿನ 263 ಮತಗಟ್ಟೆಗಳಲ್ಲೂ ವಿಶೇಷ ಸಮಗ್ರ ಮತದಾರರ ಪಟ್ಟಿ ಪರಿಷ್ಕರಣೆ 2026ರ ಕಾರ್ಯ ಸಮರೋಪಾದಿಯಲ್ಲಿ ಸಾಗುತ್ತಿದೆ. ಈ ವರೆಗೆ ವಿತರಿಸಲಾದ 2,14,454 ಎನ್ಯುಮರೇಷನ್ ನಮೂನೆ ಪೈಕಿ 1,83,167 ಭರ್ತಿಯಾಗಿದೆ ಎಂದರು.

ತಾಲ್ಲೂಕಿನಲ್ಲಿ ಬಸವನಪುರ, ಕಂಠೀರಾಯಪುರ ಮತ್ತು ನರೇನಹಳ್ಳಿ ಮೂರು ಗ್ರಾಮಗಳಲ್ಲಿ ಕುಡಿಯುವ ನೀರಿಗೆ ತೊಂದರೆಯಾಗಿದೆ. ಅದಕ್ಕೆ ಖಾಸಗಿ ಹಾಗೂ ಪರ್ಯಾಯ ವ್ಯವಸ್ಥೆ ಮೂಲಕ ಕುಡಿಯುವ ನೀರಿನ ಪೂರೈಕೆ ಮಾಡಲಾಗುತ್ತಿದೆ. ಅವಶ್ಯಕತೆ ಬಿದ್ದರೆ ಹೊಸ ಬೋರ್ ವೆಲ್ ಕೊರೆಸಿ ಕುಡಿಯುವ ನೀರು ಪೂರೈಸಲಾಗುವುದು ಎಂದರು.

ತಹಶೀಲ್ದಾರ್ ಜಿ.ಎಸ್. ಶಂಕರಪ್ಪ, ಪುರಸಭಾ ಮುಖ್ಯಾಧಿಕಾರಿ ಆರ್.ಯತೀಶ್ ಕುಮಾರ್, ಗ್ರೇಡ್ 2 ತಹಶೀಲ್ದಾರ್ ಗಿರೀಶ್ ಬಾಬು, ಚುನಾವಣಾ ಶಿರಸ್ತೇದಾರ್ ಅನಿಲ್, ತಾಲ್ಲೂಕು ಪಂಚಾಯಿತಿ ವ್ಯವಸ್ಥಾಪಕ ಗಿರೀಶ್, ಕಂದಾಯ ಶಿರಸ್ತೇದಾರರು ಹಾಗೂ ಇತರ ಇಲಾಖೆ ಅಧಿಕಾರಿಗಳು ಇದ್ದರು.

# ತಾಳೂರು ಗ್ರಾಮ ಪಂಚಾಯಿತಿಗೆ 7 ಕೋಟಿ ಅಭಿವೃದ್ಧಿ ಅನುದಾನ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಆಲೂರು: ತಾಲೂಕಿನ ತಾಳೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸಮಗ್ರ ಅಭಿವೃದ್ಧಿಗಾಗಿ ತಾವು ಅಧಿಕಾರಕ್ಕೆ ಬಂದ ಬಳಿಕ ಸುಮಾರು 7 ಕೋಟಿ ಅನುದಾನವನ್ನು ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಮೀಸಲಿಟ್ಟಿದ್ದೇನೆ ಎಂದು ಶಾಸಕ ಸಿಮೆಂಟ್ ಮಂಜು ಹೇಳಿದರು.

ಬುಧವಾರ ತಾಳೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಜಿ.ಜಿ. ಕೊಪ್ಪಲು ಗ್ರಾಮದಲ್ಲಿ ಸುಮಾರು 90 ಲಕ್ಷ ವೆಚ್ಚದ ನೂತನ ರಸ್ತೆ ನಿರ್ಮಾಣ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಅವರು ಮಾತನಾಡಿದರು.

ಗ್ರಾಮೀಣ ಪ್ರದೇಶಗಳಲ್ಲಿ ರಸ್ತೆ, ದೇವಾಲಯಗಳು ಹಾಗೂ ಮೂಲಸೌಕರ್ಯ ಅಭಿವೃದ್ಧಿಗೆ ವಿಶೇಷ ಆದ್ಯತೆ ನೀಡಲಾಗಿದ್ದು, ಜನರ ಬೇಡಿಕೆಗಳಿಗೆ ಸ್ಪಂದಿಸಿ ಹಂತ ಹಂತವಾಗಿ ಅಭಿವೃದ್ಧಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ ಎಂದು ತಿಳಿಸಿದರು.

ಅಭಿವೃದ್ಧಿ ಅನುದಾನದಡಿ ತಾಳೂರುಸಮುದ್ರವಳ್ಳಿ ಬಸವೇಶ್ವರ ದೇವಸ್ಥಾನಕ್ಕೆ 3 ಲಕ್ಷ, ಚಿಕ್ಕ ಕಣಗಾಲ್ ಕಾಲೇಶ್ವರಸ್ವಾಮಿ ದೇವಸ್ಥಾನಕ್ಕೆ 2.50 ಲಕ್ಷ, ಚೌಡೇಶ್ವರಿ ದೇವಸ್ಥಾನಕ್ಕೆ 2 ಲಕ್ಷ, ಬೊಮ್ಮನಮನೆ ಬನಶಂಕರಿ ದೇವಸ್ಥಾನಕ್ಕೆ 5 ಲಕ್ಷ, ಬೆಳ್ಳಾವರ ರಂಗನಾಥಸ್ವಾಮಿ ದೇವಸ್ಥಾನಕ್ಕೆ 1.50 ಲಕ್ಷ, ಲಕ್ಷ್ಮೀದೇವರ ದೇವಸ್ಥಾನದ ಮುಂದುವರಿದ ಕಾಮಗಾರಿಗೆ 2 ಲಕ್ಷ, ತಾಳೂರು ಬೀರಲಿಂಗೇಶ್ವರ ದೇವಸ್ಥಾನಕ್ಕೆ 2 ಲಕ್ಷ, ಕೊಪ್ಪಲು ಕೊಡಮ್ಮ ದೇವಸ್ಥಾನದ ಕಾಂಪೌಂಡ್ ನಿರ್ಮಾಣಕ್ಕೆ 1 ಲಕ್ಷ, ಬೀರಲಿಂಗೇಶ್ವರ ದೇವಸ್ಥಾನದ ಗೋಪುರ ನಿರ್ಮಾಣಕ್ಕೆ 2 ಲಕ್ಷ, ಕೆರೆಕೋಡಿ ಭೂತಪ್ಪ ಹಾಗೂ ಕೆರೆಕೋಡಿ ದೇವಸ್ಥಾನದ ಅಭಿವೃದ್ಧಿಗೆ 1 ಲಕ್ಷ ಮತ್ತು ಆಂಜನೇಯಸ್ವಾಮಿ ದೇವಸ್ಥಾನದ ಜೀರ್ಣೋದ್ಧಾರ ಹಾಗೂ ಕಾಂಕ್ರೀಟ್ ಕಾಮಗಾರಿಗೆ 5 ಲಕ್ಷ ಅನುದಾನ ನೀಡಲಾಗಿದೆ ಎಂದು ವಿವರಿಸಿದರು.

ಇದೇ ವೇಳೆ ವಾಟೆಹೊಳೆಬೆಳ್ಳಾವರ ರಸ್ತೆ ಅಭಿವೃದ್ಧಿಗೆ 68.44 ಲಕ್ಷ, ಕಲ್ಕೆರೆ ರಸ್ತೆ ಅಭಿವೃದ್ಧಿಗೆ 58.41 ಲಕ್ಷ, ಕಾಮತಿ ಕಾಲೋನಿ ರಸ್ತೆ ಅಭಿವೃದ್ಧಿಗೆ 7 ಲಕ್ಷ ಹಾಗೂ ಕಾಂತಿ ಗ್ರಾಮದ ಮುಖ್ಯ ವೃತ್ತದಿಂದ ಚಿರಂಡಿವರೆಗೆ ರಸ್ತೆ ಅಭಿವೃದ್ಧಿಗೆ ಸುಮಾರು 7 ಲಕ್ಷ ಅನುದಾನ ಮೀಸಲಿಡಲಾಗಿದೆ ಎಂದು ಮಾಹಿತಿ ನೀಡಿದರು.

# ಶಿಸ್ತು, ಸಂಸ್ಕಾರ-ಆತ್ಮವಿಶ್ವಾಸದಿಂದ ಯಶಸ್ಸು ಸಾಧ್ಯ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೇಲೂರು: ವಿದ್ಯಾರ್ಥಿಗಳು ಉತ್ತಮ ಶಿಕ್ಷಣದೊಂದಿಗೆ ಶಿಸ್ತು, ಸಂಸ್ಕಾರ ಹಾಗೂ ಆತ್ಮವಿಶ್ವಾಸವನ್ನು ಬೆಳೆಸಿಕೊಂಡರೆ ಜೀವನದಲ್ಲಿ ಯಾವುದೇ ಗುರಿಯನ್ನು ಸಾಧಿಸಲು ಸಾಧ್ಯ ಎಂದು ಶಾಸಕ ಹೆಚ್.ಕೆ. ಸುರೇಶ್ ಹೇಳಿದರು.

ಪಟ್ಟಣದ ಬಿಕ್ಕೋಡು ರಸ್ತೆಯಲ್ಲಿರುವ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಆಯೋಜಿಸಿದ್ದ ಪ್ರತಿಭಾ ಪುರಸ್ಕಾರ ಸಮಾರಂಭ ಹಾಗೂ ವಿವಿಧ ಶೈಕ್ಷಣಿಕ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಶಿಕ್ಷಣವು ಕೇವಲ ಉದ್ಯೋಗ ಪಡೆಯುವ ಸಾಧನವಾಗಿರದೆ, ಉತ್ತಮ ವ್ಯಕ್ತಿತ್ವ ರೂಪಿಸಿಕೊಳ್ಳಲು ಹಾಗೂ ಸಮಾಜಕ್ಕೆ ಮಾದರಿಯಾದ ನಾಗರಿಕರಾಗಿ ಬೆಳೆಯಲು ನೆರವಾಗಬೇಕು. ಶಿಕ್ಷಣದ ಜೊತೆಗೆ ವಿದ್ಯಾರ್ಥಿಗಳಲ್ಲಿ ಉತ್ತಮ ಸಂಸ್ಕಾರ, ಶಿಸ್ತು, ಸಮಯಪಾಲನೆ ಹಾಗೂ ಸಾಮಾಜಿಕ ಹೊಣೆಗಾರಿಕೆಯೂ ಬೆಳೆಯಬೇಕು. ಹಿರಿಯರ ಗೌರವ, ನೈತಿಕ ಮೌಲ್ಯಗಳು ಮತ್ತು ಶಿಸ್ತಿನ ಮಹತ್ವವನ್ನು ವಿದ್ಯಾರ್ಥಿಗಳು ಅರಿತುಕೊಳ್ಳುವುದು ಅಗತ್ಯವಾಗಿದೆ. ಆದ್ದರಿಂದ ಪಠ್ಯ ಶಿಕ್ಷಣದೊಂದಿಗೆ ಮೌಲ್ಯಾಧಾರಿತ



ಶಿಕ್ಷಣಕ್ಕೂ ಹೆಚ್ಚಿನ ಆದ್ಯತೆ ನೀಡಬೇಕು ಎಂದು ಕರೆ ನೀಡಿದರು.

ಕಾಲೇಜಿನ ಪ್ರಾಂಶುಪಾಲೆ ವೀಣಾ ಮಾತನಾಡಿ, ಗ್ರಾಮೀಣ ಭಾಗದ ಹೆಣ್ಣುಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಒದಗಿಸುವ ನಿಟ್ಟಿನಲ್ಲಿ ಶಾಸಕ ಹೆಚ್.ಕೆ. ಸುರೇಶ್ ಅವರ ಸಹಕಾರ ಮಹತ್ವದ್ದಾಗಿದೆ ಎಂದರು.

ಹೆಚ್ಚುವರಿ ಕೊಠಡಿಗಳು, ಹೈಟೆಕ್ ಶೌಚಾಲಯ, ಗುಣಮಟ್ಟದ ರಸ್ತೆ ಹಾಗೂ ಸಭಾಂಗಣ ಸೇರಿದಂತೆ ಹಲವು ಅಭಿವೃದ್ಧಿ ಕಾಮಗಾರಿಗಳು ವಿದ್ಯಾರ್ಥಿನಿಯರ ವಿದ್ಯಾಭ್ಯಾಸಕ್ಕೆ ಅನುಕೂಲವಾಗಿವೆ. ಕಾಲೇಜಿನಲ್ಲಿ ಉತ್ತಮ ಶೈಕ್ಷಣಿಕ ಫಲಿತಾಂಶದ ಜೊತೆಗೆ ಕ್ರೀಡೆ, ಸಾಂಸ್ಕೃತಿಕ ಹಾಗೂ ವ್ಯಕ್ತಿತ್ವ ವಿಕಸನ ಚಟುವಟಿಕೆಗಳಿಗೂ ಸಮಾನ ಆದ್ಯತೆ ನೀಡಲಾಗುತ್ತಿದೆ ಎಂದು ಹೇಳಿದರು.

ರೋಟರಿ ಕ್ಲಬ್ ಝೋನ್8ರ ಸಹಾಯಕ ಗಬರ್ನರ್ ಡಾ. ಎಸ್. ಗಣೇಶ್ ಮಾತನಾಡಿ, ವಿದ್ಯಾರ್ಥಿ ಜೀವನವು ಭವಿಷ್ಯ ರೂಪಿಸುವ ಅತ್ಯಂತ ಮಹತ್ವದ ಹಂತವಾಗಿದೆ. ವಿದ್ಯಾರ್ಥಿಗಳು ಗುರುಗಳನ್ನು ಗೌರವಿಸಿ ಶಿಸ್ತು, ಸಮಯಪಾಲನೆ ಹಾಗೂ ಉತ್ತಮ ನಡವಳಿಕೆಯನ್ನು ರೂಢಿಸಿಕೊಳ್ಳಬೇಕು. ಕೇವಲ ಅಂಕಗಳಿಗೆ ಸೀಮಿತವಾಗದೆ ಸೇವಾ ಮನೋಭಾವ, ಸಮಾಜಮುಖಿ ಚಿಂತನೆ ಮತ್ತು ನಾಯಕತ್ವ ಗುಣಗಳನ್ನು ಬೆಳೆಸಿಕೊಂಡು ಉತ್ತಮ ಪ್ರಜೆಗಳಾಗಬೇಕು ಎಂದು ಸಲಹೆ ನೀಡಿದರು.

ಸರ್ಕಾರಿ ನೌಕರರ ಸಂಘದ ತಾಲ್ಲೂಕು ಅಧ್ಯಕ್ಷ ಮಂಜುನಾಥ ಮಾತನಾಡಿ, ಖಾಸಗಿ ಶಿಕ್ಷಣ ಸಂಸ್ಥೆಗಳ ತೀವ್ರ ಪೈಪೋಟಿಯ ನಡುವೆಯೂ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜು ಶಿಸ್ತು, ಗುಣಮಟ್ಟದ ಶಿಕ್ಷಣ ಹಾಗೂ ಅತ್ಯುತ್ತಮ ಫಲಿತಾಂಶದ ಮೂಲಕ ಮಾದರಿ ಶಿಕ್ಷಣ ಸಂಸ್ಥೆಯಾಗಿ ಹೊರಹೊಮ್ಮಿದೆ. ಉಪನ್ಯಾಸಕರ ಬದ್ಧತೆ ಹಾಗೂ ವಿದ್ಯಾರ್ಥಿಗಳ ಪರಿಶ್ರಮವೇ ಕಾಲೇಜಿನ ಯಶಸ್ಸಿನ ಹಿಂದಿನ ಪ್ರಮುಖ ಕಾರಣವಾಗಿದೆ ಎಂದು ಪ್ರಶಂಸಿಸಿದರು.

ಪ್ರತಿಭಾನ್ವಿತ ವಿದ್ಯಾರ್ಥಿನಿಯರನ್ನು ಸನ್ಮಾನಿಸಲಾಯಿತು. ಕಾಲೇಜು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷೆ ಶೋಭಾ ಗಣೇಶ್, ತಾಲ್ಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಬಿ.ಬಿ. ಶಿವರಾಜ್, ಉಪನ್ಯಾಸಕರಾದ ಡಾ. ಗಣೇಶ್, ಧರ್ಮೇಗೌಡ, ನಿಂಗೇಗೌಡ, ಪ್ರೌಢಶಾಲಾ ಮುಖ್ಯ ಶಿಕ್ಷಕ ಚಂದ್ರಶೇಖರ, ಬಿಜೆಪಿ ಮುಖಂಡ ರಂಗನಾಥ್ ಸೇರಿದಂತೆ ಅನೇಕ ಗಣ್ಯರು ಉಪಸ್ಥಿತರಿದ್ದರು.

# ಕಡುಬಿನ ಕಳಸಿಗೆಯೆಂಬ ಮಿಲಿಟರಿ ಟ್ಯಾಂಕು-3

**ಧನಂಜಯ ಜೀವಾಳ ಬಿ.ಕೆ.**

**ಗ್ರಾಮಾಯಣ-28**

ಅಷ್ಟರಲ್ಲಾಗಲೇ ರಾತ್ರಿ ಹನ್ನೊಂದು ಆಗುತಿತ್ತು. ಮೂವರೂ ಒಂದೆಡೆ ನಿಂತು ಮನೆಗೆ ಹಿಂದಿರುಗುವುದೋ ಎಂದು ಯೋಚಿಸುತ್ತಿರುವಾಗ ಅವರ ಎದುರಿನ ದಬ್ಬಲಿನೊಳಗೆ ಜರಬರ ಜರಬರ ಸದ್ದಾಯಿತು. ಇದೇನು ಯಾವುದಾದರೂ ಹೊಸ ಮಿಕಾನ ಅಥವಾ ಯಾವುದಾದರೂ ಹಾವು ಇಲಿಯನ್ನೋ, ಕಪ್ಪೆಯನ್ನೋ ಹಿಡಿದು ಸೆಣಸುತ್ತಿದೆಯೋ ಎಂದು ಸಂತೋಷ ಮಿಶ್ರಿತ ಆತಂಕದಲ್ಲಿ ಮೂವರೂ ಜಾಗರೂಕರಾದರು. ಸದ್ದು ನಿಂತು ಹೋಯಿತು. ಮತ್ತೆ ಸ್ವಲ್ಪ ಹೊತ್ತಿನ ನಂತರ ಅದೇ ಸ್ಥಳದಲ್ಲಿ ಸದ್ದಾಯಿತು. ಪುಣ್ಯಮೂರ್ತಿ ದಬ್ಬಲಿನೊಳಗೆ ಟಾರ್ಚ್ ಲೈಟ್ ಬಿಟ್ಟು ನೋಡಿದ. ಎರಡು ಕೆಂಪು ಕಣ್ಣುಗಳು ಫಳಫಳ ಹೊಳೆಯಲಾರಂಭಿಸಿದವು. ಇವನು ಹೊಡೆದಿದ್ದ ಅಂದಾಜಿನ ಗುಂಡು ಎರಡು ಬಾವಲಿಗಳನ್ನು ಕೆಳಗೆ ಕೆಡವಿತ್ತು. ಲಂಟಾನದೊಳಗೆ ಸಿಕ್ಕಿಹಾಕಿಕೊಂಡು ಅತ್ತಿತ್ತ ಹರಿದಾಡುತ್ತಿದ್ದ ಬಾವಲಿಯನ್ನು ಎಳೆದು ತರುವುದು ಸುಲಭದ ಮಾತಾಗಿರಲಿಲ್ಲ. ಎತ್ತಲಿಂದ ಪ್ರಯತ್ನಿಸಿದರೂ ಮೂವರಿಗೂ ಬಾವಲಿಯು ನಿಲುಕದ ಗಂಟಾಗಿತ್ತು. ಹಾಗೂ ಹೀಗೂ ಸೀಮೆಸೀಗೆ ಜಿಗ್ಗು ಹಾಗೂ ಜೇಪಲು ಮುಳ್ಳನ್ನು ತಪ್ಪಿಸಿಕೊಂಡು ದಿಕ್ಕು ದೆಸೆಯಿಲ್ಲದೆ ಒಳನುಗ್ಗಿದ ಕರುಣಾಕರನಿಗೆ ಬಾವಲಿ ಇದ್ದ ಸ್ಥಳದ ಬಗ್ಗೆ ಗೊಂದಲ ಶುರುವಾಯಿತು. ಕೀರ್ತಿ ಅತ್ಲಾಗೆ ನೋಡು ಅನ್ನೋದು, ಪುಣ್ಯಮೂರ್ತಿ ಇತ್ಲಾಗೆ ನೋಡು ಎನ್ನುವಷ್ಟರಲ್ಲಿ ಕರುಣಾಕರ ಜೀವವೇ ಹೋಯಿತೇನೋ ಎನ್ನುವಂತೆ ಕಿರುಚಿದ. ಬಾಯಿಯನ್ನು ಬಿಟ್ಟರೆ ಪ್ರಾಣವೇ ಜಾಗಸಿಕ್ಕಂತಾಗಿ ಹೊರಟು ಹೋಗುತ್ತೇನೋ ಎಂದು ಹಲ್ಲನ್ನು ಬಿಗಿಯಾಗಿ ಕಚ್ಚಿಕೊಂಡು ಗಂಟಲಿನಿಂದಲೇ ಅಬ್ಬರಿಸತೊಡಗಿದ. ಪೆಟ್ಟು ತಿಂದು ಸಾವಿನ ಅಂಚಿನಲ್ಲಿದ್ದ ಬಾವಲಿ ಅವನ ಹಿಮ್ಮಡಿಯ ಮೇಲಿನ ಹೆದ್‌ನರವನ್ನು ಇನ್ನಿಲ್ಲದಂತೆ ಕಚ್ಚಿ ಹಿಡಿದು ತನ್ನ ನೋವಿನ ಪ್ರತೀಕಾರ ತೀರಿಸುತಿತ್ತು. ಆ ಅಸಾಧ್ಯ ಲಂಟಾನದೊಳಗೆ ಆ ಕಾಳರಾತ್ರಿಯಲ್ಲಿ ನುಸುಳಿ ಹೋಗಿದ್ದ ಕರುಣಾಕರ ಟೋಟಲಿ ಟ್ರಾಪ್‌ಡ್‌ಟಟ!!! ಹಿಂತಿರುಗಲಾಗಲೀ, ಕತ್ತನ್ನು ತಿರುಗಿಸಿ ಬಾವಲಿಯನ್ನು ನೋಡಿ ಕೊಂದು ಹಾಕಲಾಗಲೀ ಅವಕಾಶವೇ ಇಲ್ಲದಂತ ಸ್ಥಿತಿಯಲ್ಲಿ ಸಿಕ್ಕಿಹಾಕಿಕೊಂಡು ಸಹಾಯಕ್ಕಾಗಿ ಹಾತರಿಸತೊಡಗಿದ.

ಮರದ ಮೇಲಿದ್ದ ಬಾವಲಿಗಳೆಲ್ಲಾ ವಿಚಲಿತವಾಗಿ ರಪರಪ ಸದ್ದು ಮಾಡಲಾರಂಭಿಸಿದವು. ಕರುಣಾಕರ ತೆವಳಿಹೋಗಿದ್ದ ದಾರಿಯಲ್ಲಿಯೇ ನುಸುಳಿದ ಕೀರ್ತಿ ಬಹಳ ಪ್ರಯಾಸದಿಂದ ಬಾವಲಿಯ ಬೆನ್ನನ್ನು ತನ್ನಲ್ಲಿದ್ದ ಕುಡ್ಲಿನಿಂದ ಪ್ರಾಣಾಂತಿಕವಾಗಿ ಇರಿದ. ಬೆನ್ನಿನಲ್ಲಿ ಆಳವಾಗಿ ಇರಿದ ಹೊಡೆತದಿಂದ ಬಾವಲಿ ತನ್ನ ಬಾಯಿಯನ್ನು ಅರಿವಿಲ್ಲದಂತೆ ತೆರೆಯಿತು. ಕುಡ್ಲಿನ ಬಾಯಿಗೆ ಸೇರಿಕೊಂಡಂತಿದ್ದ ಬಾವಲಿಯನ್ನು ಹಾಗೆಯೇ ಎಳೆದುಕೊಂಡು ಹಿಮ್ಮುಖವಾಗಿ ತೆವಳಿದ ಕೀರ್ತಿ ಲಂಟಾನದಿಂದ ಹೊರಬಂದು ಕುಡ್ಲನ್ನು ಕೊಡಕಿದ. ದೊಪ್ಪೆಂದು ಕೆಳಗೆ ಬಿದ್ದ ಬಾವಲಿಯನ್ನು ಪುಣ್ಯಮೂರ್ತಿ ಕೋವಿಯ ಕೊಳವೆಯಿಂದ ಅಡಿಸತೊಡಗಿದ. ಕೀರ್ತಿ ಓಡಿಹೋದವನೇ ಕರುಣಾಕರನನ್ನು ಕರೆದುಕೊಂಡು ಬಂದ. ಆತನ ಹೆದ್ನರ ಸುಮಾರಾಗಿ ತುಂಡಾದ ಸ್ಥಿತಿಯಲ್ಲಿತ್ತು. ಇತ್ತ ಬಾವಲಿಯು ಕೋವಿಯ ಲೋಹದ ಕೊಳವೆಯನ್ನೇ ಆವೇಶದಿಂದ ಕಡಿಯಲಾರಂಭಿಸಿತು. ಅದರ ಆಕ್ರೋಶವನ್ನು ನೋಡಿದ ಪುಣ್ಯಮೂರ್ತಿ ಕತ್ತಿಯಿಂದ ಒಂದೇ ಏಟಿಗೆ ಅದರ ತಲೆಯನ್ನು ಚಚ್ಚಿ ಪುಡಿ ಮಾಡಿದ.

ವಿಪರೀತ ರಕ್ತ ಸ್ರಾವದಿಂದ ಕರುಣಾಕರ ನೋಡನೋಡುತ್ತಿದ್ದಂತೆ ನೆಲಕ್ಕೆ ಕುಸಿದ. ಮಾನವನ ಮೇಲೆ ದಾಳಿ ನಡೆಸಿ ರಕ್ತ ಕುಡಿಯುವ ದಕ್ಷಿಣ ಅಮೇರಿಕಾದ ವ್ಯಾಂಪೈರ್ ಬಾವಲಿಯಲ್ಲದಿದ್ದರೂ ಈ ಬಾವಲಿ ಜೀವಭಯ ಹಾಗೂ ಸಾಯುವ ಕ್ಷಣದ ಸಹಜ ಪ್ರವೃತ್ತಿಯಾದ ಪ್ರತೀಕಾರವನ್ನು ಸ್ವಾಭಾವಿಕವಾಗಿಯೇ ಪ್ರಕಟಿಸಿತ್ತು.

ಈ ಶಿಕಾರಿ ಮನೆ ಹಾಳಾಗ, ಊರಿಂದ ಸರಿಸುಮಾರು ಮೂರು ಮೈಲು ದೂರದ ಈ ಕಾಡಿನ ನಡುವೆ ಹೀಗಾಯ್ತಲ್ಲ. ಈಗ ಕರುಣಾಕರನನ್ನ ಹೇಗೆ ಡಾಕ್ಟರಲ್ಲಿಗೆ ಕರೆದೋಯ್ಯುವುದು? ಇರುವ ಮೂವರಲ್ಲಿಯೇ ದೊಡ್ಡ ದೇಹದವ ಈ ಕರುಣಾಕರ. ಈ ಕೋವಿ, ಶಿಕಾರಿಯಾದ ಪ್ರಾಣಿಗಳು, ಇತರೆ ಹತಾರಗಳನ್ನ ಹೊತ್ತುಕೊಂಡು ಈ ಸರಿಹೊತ್ತಿನಲ್ಲಿ ಏನೂ ಮಾಡಲು ಸಾಧ್ಯವಿರಲಿಲ್ಲ. ವಾಟರ್ ಕ್ಯಾನಿನಲ್ಲಿದ್ದ ನೀರನ್ನು ಕರುಣಾಕರನಿಗೆ ಕುಡಿಸಲು ಯತ್ನಿಸಿದರೂ ತೀವ್ರವಾದ ರಕ್ತಸ್ರಾವವಾಗಿದ್ದ ಆತನಿಗೆ ಈ ಲೋಕದ ಪರಿವೆಯೇ ಇದ್ದಂತಿರಲಿಲ್ಲ. ಪುಣ್ಯಮೂರ್ತಿಯನ್ನು ಅಲ್ಲಿಯೇ ಇರಲು ಹೇಳಿ, ಹೆಡ್ ಲೈಟಿನೊಂದಿಗೆ ಊರಿನೆಡೆಗೆ ಒಂದೇ ಉಸಿರಿಗೆ ಓಡತೊಡಗಿದ ಕೀರ್ತಿ. ಊರಿನ ಹಿರಿಯರಾಗಿದ್ದ ನಂಜಪ್ಪಣ್ಣನ ಮನೆಯ ಬಳಿ ಹೋಗಿ ನಿಂತವನನ್ನು ಮುಂದಡಿಯಿಡದಂತೆ ಅಡ್ಡಹಾಕಿ ನಿಲ್ಲಿಸಿದ್ದು ಅವರ ಮನೆಯ ಬಡ್ಡ, ಕಟ್ಟ ಎಂಬ ಕುಳ್ಳ ಜಾತಿಯ ನಾಯಿಗಳು.

ಆ ಸೀಮೆಗೇ ಹಳೆಯ ಶಿಕಾರಿಯೂ ಜೊತೆಗೆ ಒಂದಷ್ಟು ನಾಟಿ ಔಷಧಿಯನ್ನೂ ತಿಳಿದಿದ್ದ ನಂಜಪ್ಪಣ್ಣನೇ ಇಂಥಾ ಆಪತ್ತಿನ ಸಮಯದಲಿ ಸಹಾಯ ಮಾಡಬಹುದೆಂಬ ಭರವಸೆಯಿಂದ ಬೇರೆ ಯಾರನ್ನೂ ಆಶ್ರಯಿಸದೇ ಕರುಣಾಕರ ನೆಲಕ್ಕೊರಗಿದ್ದ ಸ್ಥಳದಿಂದ ಹೊರಡುವಾಗಲೇ ದಿಕ್ಕುತೋಚದೇ ಮೊಸರಿನ ಗಡಿಗೆಯಾಗಿದ್ದ ಮೆದುಳಿನಲ್ಲಿ ನಿಶ್ಚಯಿಸಿಕೊಂಡು ಬಂದಿದ್ದ. ಆರೂವರೆ ಅಡಿ ಎತ್ತರದ, ಮೂರಡಿ ಅಗಲದ, ಥೇಟ್ ಆಂಗ್ಲೊ ಇಂಡಿಯನ್ನನಂಥಾ ಅಜಾನುಬಾಹು ಆಸಾಮಿ ನಂಜಪ್ಪಣ್ಣ, ಆಳಿಗೆ ತಕ್ಕಂಥಾ ವ್ಯಕ್ತಿತ್ವವನ್ನೂ ಹೊಂದಿದ್ದರು. ಈ ಮಧ್ಯರಾತ್ರೀಲಿ ಯಾವನಪ್ಪಾ, ಮನೆಯಂಗಳಕ್ಕೆ ಬಂದಿರದು ಅಂದ್ಕೊಂಡು, ಯಾವನಲಾ ಅವ್ನು ಹೆದ್ಲಿಮಗ, ಏನ್ ಪ್ರಾಣ ಹೋಗಿತ್ತಾ? ಯಾಕ್ಹಂಗೆ ಹಾತುರ್ತಾ ಇದೀಯ?ಟಟ ಎಂದು ಗದರಿಸಿದರು. ನಂಜಪ್ಪಣ್ಣಾ, ನಂಜಪ್ಪಣ್ಣಾ, ನಾನು ಕೀರ್ತಿ. ಅಲ್ಲಿ ಅಗಸ್ರಳ್ಳಿ ಹತ್ರ ಕರುಣಾಕರಂಗೆ ಬಾವಲಿ ಕಚ್ಚಿ, ಅವ್ನ ಆಗ್ಲೋ ಈಗ್ಲೋ ಅಂತಿದಾನೆ. ಬಂದು ನೋಡಿ, ಅವ್ನಿಗೆ ಈಚೆಗೆ ಗ್ಯಾನಾನೇ ಇಲ್ಲ. ಅವನ್ಜೊತೆ ಪುಣ್ಯಮೂರ್ತೀನ ಬಿಟ್ ಬಂದೀನಿಟಟ ಓಡಿ ಬಂದ ಏದುಸಿರಿನಲ್ಲಿ ಒಂದೇ ಶ್ವಾಸದಲ್ಲಿ ಹೇಳಿದ ಕೀರ್ತಿ. ಓ, ನೀನೇನಾ, ಕೀರ್ತಿ. ನಾನೆಲ್ಲೋ ಪುಂಗ್ಲಿ ಗೋಪಾಲ ಅಂದ್ಕಂಡಿದ್ದೆ. ಅಲ್ಕಣ್ರ ಮಾರಾಯ, ನೀವಿಬ್ರೂ ಜೊತೇಗೆ ಯಾರ್ನಾದ್ರೂ ಸೇರಿಸ್ಕಂಡು, ಹೊತ್ಕಂಡ್ ಬರದಲ್ರೇನ್ರ?ಟಟ

ನಂಜಪ್ಪಣ್ಣಾ, ಕರುಣಾಕರನ್ನ ಯತ್ತಕ್ಕಗ್ತದಾ? ಅದೂ ಅವ ಬಿದ್ದಿರದು, ಮಲ್ಬಿದ್ಕೊಂಡದ್ ಹಿಂದಿನ್ ಹೊಂಡ್ದಾಗೆ. ನಿಮೀಗೇ ಗೊತ್ತಲ, ಬರೀಗೈಲೇ ಹತ್ತಿ ಬರಕ್ಕಾಗಲ್ಲ ಅಲ್ಲಿಂದ, ಇನ್ನು ?..ಟಟ ಸರಿ, ನಡೇರಿ, ಹೋಗ್ತಾ, ಜಗ್ಗುನ್ನೂ, ಮಲ್ಲೇಶುನ್ನೂ, ರಾಜುನ್ನೂ ಎಳಿಸ್ಕಂಡ್ ಹೋಗನ. ತಡೀ ಔಷ್ದೀ ಚೀಲಾನೂ, ಕೋವಿನೂ ತಗಂತೀನಿ.ಟಟ ಎಂದವರೇ ಮನೆಯೊಳಗೆ ಹೋದರು. (ಮುಂದುವರಿಯುವುದು)

## ಇತಿಹಾಸದಲ್ಲಿ ಈ ದಿನ

### ಜುಲೈ-23

1945: ಎರಡನೇ ವಿಶ್ವಯುದ್ಧದ ಸಂದರ್ಭದಲ್ಲಿ ಬ್ರಿಟಿಷ್ ಸೇನೆಯ ಮಾಜಿ ಪ್ರಧಾನಿ ವಿನ್‌ಸ್ಟನ್ ಚರ್ಚಿಲ್ ಚುನಾವಣೆಯಲ್ಲಿ ಸೋತರು.

1952: ಈಜಿಪ್ಟ್‌ನಲ್ಲಿ ಜುಲೈ ಕ್ರಾಂತಿ ಆರಂಭಗೊಂಡು ರಾಜ ಫರೂಕ್ ಅವರ ಆಡಳಿತ ಅಂತ್ಯಗೊಳ್ಳುವ ಪ್ರಮುಖ ಘಟನೆಗಳಿಗೆ ಚಾಲನೆ ದೊರೆಯಿತು.

**ಜನನ**

1906: ಭಾರತದ ಮಹಾನ್ ಕ್ರಾಂತಿಕಾರಿ ಚಂದ್ರಶೇಖರ ಆಜಾದ್

1973: ಭಾರತದ ಪ್ರಸಿದ್ಧ ಚಲನಚಿತ್ರ ನಟ ಹಿಮೇಶ್ ರೇಷಮಿಯಾ

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248